

ಹೌದು! ಕೆಲವರನ್ನು ಯಾಕೆ ಈ ಪರಿಯಾಗಿ ಹಚ್ಚಿಕೊಂಡುಬಿಡುತ್ತೇವೆ ಎನ್ನುವುದು ನಮಗೇ ಗೊತ್ತಾಗುವುದಿಲ್ಲ. ಈ ಬಾಲನ್ ವಿಷಯದಲ್ಲಿಯೂ ಹಾಗೆ. ನನಗೆ ಮಾತ್ರ ಅಲ್ಲ, ನಮ್ಮ ಬಡಾವಣೆಯ ಹೆಚ್ಚಿನ ಹೆಂಗಳೆಯರು ಅವನಿಗಾಗಿ ಕಾಯುವುದು ಪರಿಪಾಟವೇ ಆಗಿಬಿಟ್ಟಿದೆ. ನಮ್ಮ ಬಡಾವಣೆಯೇನು... ದೊಡ್ಡ ರಸ್ತೆಯ ಆಚೀಚೆಯವರಿಗೂ ಬಾಲನ್ ಬಲು ಅಚ್ಚುಮೆಚ್ಚು.

ಹಾಗಾದರೆ ಇವನು ಸಿನಿಮಾ ಹೀರೋನಾ... ಟೀವಿ ಧಾರಾವಾಹಿಗಳಲ್ಲಿ ನಟಿಸುವವನಾ... ಸಂಗೀತಗಾರನಾ... ಒಳ್ಳೆಯ ಮಾತುಗಾರನಾ... ಸುಂದರಾಂಗನಾ... ರಾಜಕೀಯ ವ್ಯಕ್ತಿಯಾ... ಯಾರೀತ ಎಂಬ ಕುತೂಹಲಕ್ಕೆ ಉತ್ತರ ಎಂದರೆ ಇವನು ಅಂತಹ ಹೀರೋ ಅಂತೂ ಅಲ್ಲವೇ ಅಲ್ಲ. ಹರಟೆ ಮಲ್ಲನೂ ಅಲ್ಲ. ನಿಜ ಹೇಳಬೇಕೆಂದರೆ ತುಂಬಾ ದಾಕ್ಷಿಣ್ಯ ಪ್ರವೃತ್ತಿಯವ. ಬೇಕಾದಷ್ಟೇ ಮಾತು. ಯಾವಾಗಲೂ ಮುಖದಲ್ಲಿ ಕಂಡೂ ಕಾಣದ ಮಾಸದ ನಗು. ಆಡುವ ಮಾತೂ ಅಷ್ಟೇ ಮೃದು. ಶಾಂತಿಯ ಮುಖ ಮುದ್ರೆ... ಅವನು ಸಿಟ್ಟು ಮಾಡಿದ್ದನ್ನು ಯಾರೂ